ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Wednesday, the 16th May, 1979/Vaishaka 26, 1901 SE.

The House met in the Assembly Chamber, Vidhana Soudha, at Twelve of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS

(to which oral Answers were given)

Students Hostels at Davanagere

134 SRI PAMPAPATHY (Davanagere).—Will the Minister for Law Social Welfare and Backward Classes be pleased to state .-

(a) the number of hostels in Davanagere :

(b) out of them, the number of backward classes hostels

(c) whether, the residential and all other facilities, provided by the Government are available to the backward class students of the said hostels :

(d) if so, whether it has come to the notice of the Government that proper meals are not being provided to the students of Bhovi hostel and the reasons for improper arrangements in the Hostel ;

(e) the steps taken by the Government for the progress of this Hostel ?

SRI L. G. HAVANUR (Minister for law, Social Welfare and Backward Classes).—

(a) 6 (Six)

(b) 6 (Six)

(c) Free boarding and lodging, cloths, books and other facilities are being provided in the Government Hostels. Financial assistance is being provided to the aided hostels for giving boarding and lodging facilities.

(d) Some complaints have been received in this regard and the same has been enquired into. It is found out, after the enquiry that there is no truth in the complaints. However, instructions have been given to the managing committee of the hostel to the effect that the affairs of the hostels should be conducted properly without giving room to any complaints.

(e) Arrangements regarding scholarship and hostel facilities have been made to all the backward class students as per rules.

ಶ್ರೀ ಪಂಪಾಪತಿ.—ನನ್ನ ಪ್ರಶ್ನೆಗೆ ಉತ್ತರವಾಗಿ ದಾವಣಗೆರೆಯಲ್ಲಿ ಒಟ್ಟು ಆರು ವಿದ್ಯಾರ್ಥಿ ನಿಲಯಗಳು ಇವೆಯೆಂದು ಹೇಳಿದ್ದೀರಿ. ಅಲ್ಲಿ ಬೇರೆ ವಿದ್ಯಾರ್ಥಿನಿಲಯಗಳು ಇಲ್ಲವೇ ?

ಶ್ರೀ ಎಲ್. ಜಿ. ಹಾವನೂರ್.—ನಾವು ಖಚಿತಪಡಿಸಿಕೊಂಡೆ ಉತ್ತರವನ್ನು ಪ್ರಿಂಟ್ ಮಾಡಿಸಿರುತ್ತೇವೆ.

ಶ್ರೀ ಪಂಪಾಪತಿ.—ದಾವಣಗೆರೆಯಲ್ಲಿ ಇರುವ ಒಟ್ಟು ವಿದ್ಯಾರ್ಥಿನಿಲಯಗಳು ಎಷ್ಟು ಇವೆಯೆಂದು ಪ್ರಶ್ನೆ ಹಾಕಿದ್ದಕ್ಕೆ ತಾವು ಆರು ಇವೆಯೆಂದು ಹೇಳಿದ್ದೀರಿ. ಬೇರೆ ಎಷ್ಟು ವಿದ್ಯಾರ್ಥಿನಿಲಯಗಳು ಅಲ್ಲಿವೆ ಎಂಬುದನ್ನು ತಿಳಿಸುತ್ತೀರಾ

ಶ್ರೀ ಎಲ್. ಜಿ. ಹಾವನೂರ್.—ನಮಗೆ ಸಂಬಂಧಪಟ್ಟ ವಿದ್ಯಾರ್ಥಿನಿಲಯಗಳು ಆರು, ಖಾಸಗಿ ವಿದ್ಯಾರ್ಥಿನಿಲಯಗಳು ಅನೇಕ ಇರಬಹುದು. ಅಲ್ಲಿ ಅನೇಕ ಖಾಸಗಿ ವಿದ್ಯಾ ಸಂಸ್ಥೆಗಳು ಉಂಟು, ಅವರು ವಿದ್ಯಾರ್ಥಿನಿಲಯಗಳನ್ನು ಇಟ್ಟುಕೊಂಡಿರಬಹುದು. ಸರ್ಕಾರದ ವತಿಯಿಂದ ನಾವು ಉತ್ತರ ಕೊಡಬೇಕಾದರೆ ಸರ್ಕಾರದಿಂದ ನಡೆಸತಕ್ಕ ನಿಲಯಗಳು ಆರು ಇವೆ, ಆರು ಎಂದು ನಾವು ಉತ್ತರ ಕೊಟ್ಟಿದ್ದೇವೆ.

ಶ್ರೀ ಪಂಪಾಪತಿ.—ಸರ್ಕಾರದ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಊಟ, ವಸತಿ, ಪುಸ್ತಕ ಎಲ್ಲಾ ಕೊಡುತ್ತೀರಿ. ಬೇರೆ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಕೇವಲ ೪೦ ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದೀರಿ. ಇಷ್ಟು ಸ್ವಲ್ಪ ಹಣದಲ್ಲಿ ಅವರು ಆಭ್ಯಾಸ ಮಾಡುವುದು ಬಹಳ ಕಷ್ಟವಾಗುತ್ತದೆ. ಸರ್ಕಾರಿ ವಿದ್ಯಾರ್ಥಿನಿಲಯದಲ್ಲಿರುವಂತೆ ಇವರಿಗೂ ಎಲ್ಲಾ ಅನುಕೂಲಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಲ್. ಜಿ. ಹಾವನೂರ್.—ಅದು ಹಾಗೆ ಆಗಲಿಕ್ಕಿಲ್ಲ. ಖಾಸಗಿ ಕೆಲವು ಶಿಕ್ಷಣ ಸಂಸ್ಥೆಗಳು ಬೇರೆ ವರ್ಗದ ವಿದ್ಯಾರ್ಥಿಗಳನ್ನು ಸೇರಿಸುವುದರಿಂದ ನಾವು ಇಷ್ಟು ಹಣವನ್ನು ಮಾತ್ರ ಕೊಡುತ್ತಿದ್ದೇವೆ. ಇದರಲ್ಲಿ ಮೇಂಟೆನೆನ್ಸ್‌ಗೋಸ್ಕರ ೧೦ ರೂಪಾಯಿಗಳನ್ನು ನಿಲಯದವರು ಹಿಡಿದುಕೊಂಡು ೪೦ ರೂಪಾಯಿಗಳನ್ನು ವಿದ್ಯಾರ್ಥಿಗಳಿಗೋಸ್ಕರ ಉಪಯೋಗ ಮಾಡುತ್ತಿದ್ದಾರೆ. ಇವರಿಗೆ ನಾವು ಮೇಂಟೆನೆನ್ಸ್ ಖರ್ಚನ್ನು ಕೊಡಲಿಕ್ಕಾಗುವುದಿಲ್ಲ.

ಶ್ರೀ ಪಂಪಾಪತಿ.—ನಾನು ಕೇಳುತ್ತಾ ಇರುವುದು, ಹಿಂದುಳಿದ ವರ್ಗದವರಿಗೆ ವಿದ್ಯಾರ್ಥಿಗಳಿಗೆ ೪೦ ರೂಪಾಯಿಗಳನ್ನು ಕೊಡುತ್ತೀರಿ, ಜನರಲ್ ಹಾಸ್ಟಲಿನಲ್ಲಿರತಕ್ಕವರಿಗೆ ಎಲ್ಲಾ ಸೌಲಭ್ಯಗಳನ್ನು ಕೊಡುತ್ತೀರಿ. ಅಲ್ಲಿ ಎಲ್ಲಾ ಜಾತಿಯ ಮಕ್ಕಳೂ ಇರುತ್ತಾನೆ. ಈ ೪೦ ರೂಪಾಯಿಗಳಿಂದ ಇವರು ಯಾವರೀತಿ ಅಭ್ಯಾಸ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡಬೇಕು. ಇವರಿಗೂ ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಲ್. ಜಿ. ಹಾವನೂರ್.—ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳೇ ಇರಲಿ, ಭಿನ್ನ ವರ್ಗದವರ ನಿಲಯಗಳೇ ಇರಲಿ, ಅಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ಇದ್ದರೆ ಅವರಿಗೆ ಸಹಾಯಧನವನ್ನು ಕೊಡಬಹುದೇ ವಿನಹ ಇರುವವರೆಲ್ಲರಿಗೂ ಸಹ ನಾವು ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ ಹಿಂದುಳಿದವರಲ್ಲಿ ಆಗಲೀ, ಎಲ್ಲರಿಗೂ ಸರ್ಕಾರ ಕೂಳು, ಬಟ್ಟೆ, ಸರ್ಕಾರಿ ನೌಕರಿ ಕೊಡಿಸುವಂಥ ಎಲ್ಲಾ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ. ಖಾಸಗಿ ಸಂಸ್ಥೆಯವರೂ ಸಹ ಸ್ವಲ್ಪ ರೀತಿಯಿಂದ ಉದಾ

ರವಾಗಿ ಸಹಾಯ ಮಾಡಲಿ ಎಂದು ನಾವೂ ಸರ್ಕಾರದಿಂದ ಸಹಾಯಧನವನ್ನು ಕೊಡುತ್ತಿದ್ದೇವೆ. ನಾವು ಕೊಡುವ ೪೦ ರೂಪಾಯಿಗಳು ಕಡಿಮೆ ಎಂದು ಕಂಡುಬಂದರೂ ಸಹ ನಮಗೆ ಸರ್ಕಾರದಿಂದ ಇಷ್ಟೇ ಹಣ ಕೂಡಬೇಕೆಂದು ಮಿತಿ ಇದೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಈ ಆರು ವಿದ್ಯಾರ್ಥಿನಿಲಯಗಳಲ್ಲಿ ಪೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಪೆಡುಲ್ಡ್ ಟ್ರೈಬ್ಸ್ ಮತ್ತು ಹಿಂದುಳಿದ ವಿದ್ಯಾರ್ಥಿಗಳಿಗೆ ಪ್ರವೇಶ ದೊರಕದೆ ಅವರು ಬೇರೆ ಕಡೆಯಲ್ಲಿ ಆಶ್ರಯ ಪಡೆಯಬೇಕಾಯಿತು. ಆದ್ದರಿಂದ ಇರುವಂಥ ಸರ್ಕಾರಿ ವಿದ್ಯಾರ್ಥಿನಿಲಯಗಳನ್ನು ಬಡಾವಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಲ್. ಜಿ ಹಾವನೂರ್.—ಪ್ರತಿವರ್ಷವೂ ವಿದ್ಯಾರ್ಥಿಗಳ ಸಂಖ್ಯೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾ ಇರುವುದರಿಂದ ಸರ್ಕಾರದಲ್ಲಿ ಈ ಖಾತೆಗೆ ಹಣವನ್ನು ಕೊಡುವಾಗ ಒಂದು ಮಿತಿಯನ್ನು ಇಟ್ಟಿದ್ದಾರೆ. ಆದ್ದರಿಂದ ನಾವು ಪ್ರತಿಯೊಬ್ಬ ವಿದ್ಯಾರ್ಥಿಗೂ ಸಹಾಯಧನವನ್ನು ಕೊಡಬೇಕೆಂದರೆ ಸ್ವಲ್ಪ ಕಷ್ಟದಾಯಕ. ಆದರೂ ಕೂಡ ಹರಿಜನರಾಗಲೀ, ಹಿಂದುಳಿದ ವಿದ್ಯಾರ್ಥಿಗಳಾಗಲೀ, ಅತಿ ಕೆಳ ಮಟ್ಟದ ಆರ್ಥಿಕ ಆದಾಯದಿಂದ ಬರತಕ್ಕವರ ಮಕ್ಕಳಿಗೆ ನಾವು ಸಹಾಯಮಾಡಬೇಕು, ಎನ್ನುವ ಭಾವನೆ ನಮಗೆ ಇದೆ. ಇನ್ನು ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಸಿಕ್ಕದಂಥ ವಿದ್ಯಾರ್ಥಿಗಳಿಗೆ ಖಾಸಗಿ ಸಂಸ್ಥೆಗಳಲ್ಲಿ ಅವಕಾಶ ಸಿಕ್ಕರೆ ಅವರಿಗೂ ನಾವು ಧನಸಹಾಯ ಮಾಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ಹಾಸ್ಟಲುಗಳಲ್ಲಿರುವ ವಿದ್ಯಾರ್ಥಿಗಳಿಗೆ ೫೦ ರೂಪಾಯಿ ಗಳನ್ನು, ೪೦ ರೂಪಾಯಿಗಳು ಊಟಕ್ಕೆ, ೧೦ ರೂಪಾಯಿಗಳು ಇತರೆ ಖರ್ಚಿಗೆ ಕೊಡುತ್ತಿದ್ದೇವೆ ಎಂದು ತಿಳಿಸಿದ್ದೀರಿ. ನಾನು ಕೆಲವು ಹಾಸ್ಟಲುಗಳಿಗೆ ಹೋಗಿ ನೋಡಿದ್ದೇನೆ. ಅಲ್ಲಿರುವ ಮಕ್ಕಳಲ್ಲಿ ನೂರಕ್ಕೆ ೯೯ ಜನ ಮಕ್ಕಳಿಗೆ ನೀವು ಕೊಡುವ ಊಟ ಸಾಲದು. ತಾವು ಕೊಡುವಂಥ ೪೦ ರೂಪಾಯಿಗಳಲ್ಲಿಯೇ ನಿಲಯದವರು ಊಟ ಹಾಕಬೇಕೆಂದು ಕಡಿಮೆ ಬೆಲೆಯ ಪದಾರ್ಥಗಳನ್ನು ತಂದು ಮಕ್ಕಳಿಗೆ ಊಟ ಮಾಡಿ ಹಾಕಿ ಅವರ ಆರೋಗ್ಯ ಕೆಟ್ಟುಹೋಗಿದೆ. ಸುಮಾರು ೨೫ ವಿದ್ಯಾರ್ಥಿಗಳಲ್ಲಿ ೨೦ ಜನ ವಿದ್ಯಾರ್ಥಿ ಗಳು ಕಜ್ಜಿ ಮತ್ತು ಇತರೆ ರೋಗದಿಂದ ನರಳುತ್ತಿರುವುದನ್ನು ನೋಡಿ ನನಗೆ ಸಂಕಟವಾಯಿತು. ಸರ್ಕಾರದವರು ಅವರಿಗೆ ಹೊಟ್ಟೆ ತುಂಬ ಊಟ ಕೊಡುವ ವ್ಯವಸ್ಥೆ ಮಾಡಿ ಇಲ್ಲದೇ ಹೋದರೆ ಅವರನ್ನು ಹೊರಗಡೆ ಬಿಟ್ಟು ಬಿಡಿ, ಎಲ್ಲಿಯಾದರೂ ಜೀವನಮಾಡಿಕೊಂಡು ಹೋಗಲಿ. ನಿಮ್ಮ ಸಹಾಯಧನವನ್ನು ಸ್ವಲ್ಪ ಹುಡುಗರಿಗೆ ಕೊಡಿ, ಕೊಡುವುದನ್ನು ಸರಿಯಾಗಿ ಕೊಟ್ಟು ಅವರು ಆರೋ ಗ್ಯವಂತರಾಗಿರುವಂತೆ ವ್ಯವಸ್ಥೆ ಮಾಡಿ.

ಶ್ರೀ ಎಲ್. ಜಿ. ಹಾವನೂರ್.—ಇದು ಪಾಲಿಸಿ ವಿಷಯವಾಗುವುದರಿಂದ, ತಕ್ಷಣವೇ ನಿರ್ಧಾರ ತೆಗೆದುಕೊಂಡು ಉತ್ತರ ಕೊಡಲಿಕ್ಕಾಗುವುದಿಲ್ಲ.

Bridge on Hukkeri-Hatharagi Road

343 M. S. PATIL (Sankeswara).—Will the Minister for Public Works be pleased to state :—

(a) whether the Government have taken any action to construct a new bridge across Hiranyakeshi River on Hukkeri-Hattharagi road

(b) if so, the details of the same ?

SRI S. BANGARAPPA (Minister for Public Works).—

(a) No.

(b) This question does not arise.